ನಂ.ನಸತು/ವಾಸನಹ/2/2009-10 **ನಗರಸಭಾ ಕಾರ್ಯಾಲಯ**

**ತುಮಕೂರು**

ದಿನಾಂಕ: 06-08-2009

**ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆಯಡಿ (ಐ.ಡಿ.ಎಸ್.ಎಂ.ಟಿ)ಮತ್ತು ಹತ್ತನೇ ಹಣಕಾಸು ಯೋಜನೆಯಲ್ಲಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳನ್ನು ಸಾರ್ವಜನಿಕ**

# <u>ಟೆಂಡರ್ ಹಾಗೂ ಬಹಿರಂಗ ಹರಾಜು ಪ್ರಕಟಣೆ</u>

ತುಮಕೂರು ನಗರಸಭೆಯ ಐ.ಡಿ.ಎಸ್.ಎಂ.ಟಿ ಬಡಾವಣೆ (ಶಿರಾಗೇಟ್ ಹತ್ತಿರ) ಯಲ್ಲಿ ನಿರ್ಮಿಸಿರುವ 64 ಮಳಿಗೆಗಳ ಪೈಕಿ 44 ಮಳಿಗೆಗಳು ಹಾಗೂ ಹತ್ತನೇ ಹಣಕಾಸು ಯೋಜನೆಯಲ್ಲಿ ಐ.ಡಿ.ಎಸ್.ಎಂ.ಟಿ ಬಡಾವಣೆ (ಶಿರಾಗೇಟ್ ಹತ್ತಿರ)ನಿರ್ಮಿಸಿರುವ7 ಮಳಿಗೆಗಳು, ಈ ಕೆಳಕಂಡ ಷರತ್ತುಗಳಿಗೊಳಪಟ್ಟು <u>ಮಾಹೆಯಾನ ಪರವಾನಗಿ ಶುಲ್ಕ ಮತ್ತು ಒಂದೇ ಕಂತಿನ ಪ್ರೀಮಿಯಂ</u> ರೀತ್ಯಾ ಮೊತ್ತ ಪಾವತಿಸಲು ಮೂಹರ್ ಮಾಡಿದ ಟೆಂಡರ್ ಹಾಗೂ ಬಹಿರಂಗ ಹರಾಜನ್ನು ಐ.ಡಿ.ಎಸ್ .ಎಂ.ಟಿ. ವಾಣಿಜ್ಯ ಸಂಕೀರ್ಣ ಶಿರಾಗೇಟ್ ಹತ್ತಿರ ದಿನಾಂಕ 26-08-2009 ರಂದು ಸಮಯ 11.30 ರಿಂದ ಸಾರ್ವಜನಿಕವಾಗಿ ವಿಲೇ ಮಾಡಲಾಗುವುದು.

ಟೆಂಡರ್ ಸ್ವೀಕರಿಲಾಗುವ ಹಾಗೂ ಹರಾಜಿನ ಷರತ್ತುಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.

**<u>ಪ್ರತಿ ಮಳಿಗೆಗಳನ್ನು ಪಡೆಯಲು ಇಚ್ಛಿಸುವವರು:</u>**

1. **ಪ್ರತಿ ಮಳಿಗೆಗಳಿಗೆ ಪ್ರತ್ಯೇಕ ಹಿಂತಿರುಗಿಸಲಾಗದ ಪ್ರೀಮಿಯಂ ಮೊತ್ತವನ್ನು ಹಾಗೂ ಸ್ವವಿವರ ವನ್ನು ಸ್ಪಷ್ಟವಾಗಿ ನಮೂದಿಸಿ ಪ್ರತ್ಯೇಕ ಲಕೋಟೆಯಲ್ಲಿ ಸಲ್ಲಿಸಬೇಕು.**
2. ಪ್ರತಿ ಟೆಂಡರದಾರರು ದೊಡ್ಡಮಳಿಗೆಗೆ ಭದ್ರತಾ ಠೇವಣಿ ರೂ.10,000/- ಮತ್ತು ಚಿಕ್ಕ ಮಳಿಗೆಗಳಿಗೆ ರೂ.8,000/- ಪೌರಾಯುಕ್ತರು ತುಮಕೂರು ರವರ ಪರವಾಗಿ ಪಡೆದ ರಾಷ್ಟ್ರೀಕೃತ ಬ್ಯಾಂಕಿನ ಡಿ.ಡಿಯನ್ನು ಲಗತ್ತಿಸಬೇಕು.
3. **ಪ್ರತಿ ಟೆಂಡರ್‌ದಾರರು ಪ್ರತ್ಯೇಕವಾಗಿ ಮಳಿಗೆ ಸಂಖ್ಯೆ ಮತ್ತು ವಾಣಿಜ್ಯ ಸಂಕೀರ್ಣದ ಹೆಸರು ಮತ್ತು ಸ್ವವಿಳಾಸವನ್ನು ಮೊಹರು ಮಾಡಿದ ಲಕೋಟೆಯ ಮೇಲೆ <u>ಸ್ಪಷ್ಟವಾಗಿ ಹಾಗೂ ಕಡ್ಡಾಯವಾಗಿ ನಮೂದಿಸಬೇಕು.</u>**
4. ಮೊಹರು ಮಾಡಿದ ಟೆಂಡರ್ ಲಕೋಟೆಯನ್ನು ಮೇಲೆ ನಮೂದಿಸಿದ ಸ್ಪಷ್ಟ ವಿವರಗಳೊಂದಿಗೆ ದಿನಾಂಕ: 25-08-2009 ರಂದು ಸಂಜೆ 4-00 ಘಂಟೆಯ ಒಳಗಾಗಿ **ಪೌರಾಯುಕ್ತರು ನಗರಸಭೆ ತುಮಕೂರು, ಹಾಗೂ ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ತುಮಕೂರು** ಇವರಿಗೆ ಸಲ್ಲಿಸಬಹುದು.
5. ಹರಾಜಿನಲ್ಲಿ ಭಾಗವಹಿಸುವವರು ಹರಾಜಿನ ನಿಗಧಿತ ದಿನಾಂಕದಂದು ಬೆಳಿಗ್ಗೆ 10 ಘಂಟೆಯಿಂದ 11-30 ಘಂಟೆಯ ಒಳಗಾಗಿ ಆಯಾಯ ಮಳಿಗೆಗೆ ನಿಗಧಿಪಡಿಸಿದ ಠೇವಣಿಯನ್ನು ಸ್ಥಳದಲ್ಲಿಯೇ ಇರುವ ನಗರಸಭೆಯ ನಗದು ಗುಮಾಸ್ತರಲ್ಲಿ ಜಮಾ ಮಾಡಿ ಹಣ ಸ್ವೀಕೃತಿ ಪಡೆದು ಅಥವಾ ಡಿ.ಡಿ ಸಲ್ಲಿಸಿ ಹರಾಜಿನಲ್ಲಿ ಭಾಗವಹಿಸಬಹುದು. ಹರಾಜನ್ನು 11-30 ರಿಂದ ಪ್ರಾರಂಭಿಸಲಾಗುವುದು. ಅಲ್ಲದೆ ಮುಂದಿನ ಪ್ರತಿ ಅಂಗಡಿ ಮಳಿಗೆಯ ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸಿದವರು ಪ್ರತಿ ಮಳಿಗೆಗಳ ಹರಾಜಿನ

ಮುಂಚಿತವಾಗಿ ಠೇವಣಿ ಪಾವತಿಸಲು ಅವಕಾಶವಿರುತ್ತದೆ. ಪ್ರತಿಯೊಂದು ವಾಣಿಜ್ಯ ಮಳಿಗೆ ಪ್ರತ್ಯೇಕ ಮಾಹೆಯಾನ ಪರವಾನಗಿ ಶುಲ್ಕವನ್ನು ಕೆಳಕಂಡಂತೆ ನಿಗಧಿಪಡಿಸಲಾಗಿದೆ. **ಪ್ರೀಮಿಯಂಗಾಗಿ ಟೆಂಡರ್ ಹಾಗೂ ಬಹಿರಂಗ ಹರಾಜು ಮಾಡಲಾಗುವುದು.** ಅಂಗವಿಕಲರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಆಯಾಯ ವಾಣಿಜ್ಯ ಸಂಕೀರ್ಣಗಳಲ್ಲಿ ಮಳಿಗೆಗಳನ್ನು ಕಾಯ್ದಿರಿಸಿದೆ.

6. ನಿಗಧಿತ ಟೆಂಡರ್ ದಾರನು ಯಾವುದೇ ಮಳಿಗೆಗಳ ಹರಾಜಿನಲ್ಲಿ ಬಾಗವಹಿಸ ಬಹುದು ಅದರೆ ಒಂದು ಮಳಿಗೆಯ ಯಶಸ್ವಿ ಬಿಡ್ ದಾರನು ಯಾವುದೇ ಮತ್ತೋಂದು ಮಳಿಗೆಯ ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸಿದಲ್ಲಿ ಮರು ನಿಗಧಿತ ಠೇವಣಿಯನ್ನು ಅಂಥ ಅಂಗಡಿ ಮಳಿಗೆಗಳ ಹರಾಜು ನಡೆಯುವ ಪ್ರಕ್ರಿಯೆಯಲ್ಲಿ ಪಾವತಿಸಿ ಭಾಗವಹಿಸಬಹುದು.

ಬಹಿರಂಗ ಹರಾಜಿನ ಪ್ರಕೀಯೆ ಮುಗಿದ ನಂತರ ಅಂಗಡಿಗೆ ಸಂಬಂದಿಸಿದಂತೆ ಸ್ವೀಕರಿಸಲಾದ ಮೊಹರಾಗಿಟ್ಟಿದ್ದ ಟೆಂಡರ್ ಲಕೋಟೆಯನ್ನು ಹರಾಜಿನ ಸ್ಥಳದಲ್ಲಿಯೇ ತೆರೆದು ಬಹಿರಂಗಗೊಳಿಸಲಾಗುವುದು.ಹರಾಜಿನಲ್ಲಿ ಅಥವ ಟೆಂಡರ್ ನಲ್ಲಿ ನಮೂದಿಸಿರುವ ಪರವಾನಗಿ ಶುಲ್ಕ ಪ್ರೀಮಿಯಂ ಮೊತ್ತಗಳ ಪೈಕಿ ಹೆಚ್ಚಿನ ಮೊತ್ತ ಇರುವಂತಂಹ ಟೆಂಡರ್‌ದಾರರ/ಬಿಡ್‌ದಾರರ ಪರವಾಗಿ ತಾತ್ಕಾಲಿಕವಾಗಿ ಸಂಬಂಧಪಟ್ಟ ಮಳಿಗೆಗಳ ಗುತ್ತಿಗೆಯನ್ನು ಅಂಗೀಕರಿಸಲಾಗುವುದು. ಟೆಂಡರ್ ಅಥವಾ ಬಿಡ್‌ನ ಅಂತಿಮವಾಗಿ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರಿಗೆ ಕಾಯ್ದಿರಿಸಲಾಗಿದೆ.

**ಐ.ಡಿ.ಎಸ್.ಎಂ.ಟಿ ಬಡಾವಣೆ (ಶಿರಾಗೇಟ್ ಹತ್ತಿರ)ಯಲ್ಲಿ ನಿರ್ಮಿಸಿರುವ 64 ಮಳಿಗೆಗಳ ಪೈಕಿ 44 ನ್ನು ಹರಾಜು ದಿನಾಂಕ : 26-08-2009 ಸಮಯ; 11-30 ಘಂಟೆಗೆ ನೆಡೆಯುವದು, ಮಾಸಿಕ ಬಾಡಿಗೆ ರೂ.2,200-00 ನಿಗದಿಯಾಗಿದೆ.**

**ಮಳಿಗೆಗಳ ವಿವರ.**

| ಕ್ರ. ಸಂ. | ಮಳಿಗೆಗಳ ಸಂಖ್ಯೆ | ಅಳತೆ ಮೀಟರ್ ಗಳಲ್ಲಿ | | ಚಕ್ಕುಬಂದಿ | | | | ಒಟ್ಟು ವಿಸ್ತೀರ್ಣ ಚ.ಮೀ | ಪ.ಜಾ/ಪಂಗಡ ದವರಿಗೆ ಕಾಯ್ದಿರಿಸಿದ ಮಳಿಗೆ ಸಂಖ್ಯೆ | ಅಂಗವಿಕಲರಿಗೆ ಕಾಯ್ದಿರಿಸಿದ ಸಂಖ್ಯೆ |
|---|---|---|---|---|---|---|---|---|---|---|
| | | ಉ.ದ | ಪೂ.ಪ | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | | | |
| 1 | 7 | 4.00 | 3.00 | ಮಳಿಗೆ-6 | ಮಳಿಗೆ-8 | ಪ್ಯಾಸೇಜ್ | ಮಳಿಗೆ-14 | 12.00 | | |
| 2 | 11 | 4.00 | 3.00 | ಮಳಿಗೆ12 | ಪ್ಯಾಸೇಜ್ | ಮಳಿಗೆ-10 | ಪ್ಯಾಸೇಜ್ | 12.00 | | |
| 3 | 12 | 4.00 | 3.00 | ಮಳಿಗೆ.13 | ಮಳಿಗೆ.11 | ಮಳಿಗೆ-9 | ಪ್ಯಾಸೇಜ್ | 12.00 | | |
| 4 | 13 | 4.00 | 3.00 | ಮಳಿಗೆ.14 | ಮಳಿಗೆ12 | ಮಳಿಗೆ-14 | ಪ್ಯಾಸೇಜ್ | 12.00 | | |
| 5 | 14 | 4.00 | 3.00 | ಮಳಿಗೆ15 | ಮಳಿಗೆ13 | ಮಳಿಗೆ-7 | ಪ್ಯಾಸೇಜ್ | 12,00 | ಪ.ಜಾ | |
| 6 | 15 | 4.00 | 3.00 | ಮಳಿಗೆ-5 | ಮಳಿಗೆ-4 | ಮಳಿಗೆ-6 | ಪ್ಯಾಸೇಜ್ | 12.00 | ಪ.ಪಂ | |
| 7 | 16 | 4.00 | 3.00 | ಮೆಟ್ಟಿಲು | ಮಳಿಗೆ17 | ಪ್ಯಾಸೇಜ್ | ಮಳಿಗೆ-23 | 12.00 | | |
| 8 | 17 | 4.00 | 3.00 | ಮಳಿಗೆ16 | ಮಳಿಗೆ18 | ಪ್ಯಾಸೇಜ್ | ಮಳಿಗೆ-22 | 12.00 | | |
| 9 | 18 | 4.00 | 3.00 | ಮಳಿಗೆ.17 | ಮಳಿಗೆ19 | ಪ್ಯಾಸೇಜ್ | ಮಳಿಗೆ-21 | 12.00 | | |
| 10 | 19 | 4.00 | 3,00 | ಮಳಿಗೆ.18 | ಪ್ಯಾಸೇಜ್ | ಪ್ಯಾಸೇಜ್ | ಮಳಿಗೆ-20 | 12.00 | | |
| 11 | 20 | 4.00 | 3.00 | ಮಳಿಗೆ.21 | ಪ್ಯಾಸೇಜ್ | ಮಳಿಗೆ-19 | ಪ್ಯಾಸೇಜ್ | 12.00 | | |
| 12 | 21 | 4.00 | 3.00 | ಮಳಿಗೆ22 | ಮಳಿಗೆ-20 | ಮಳಿಗೆ-20 | ಪ್ಯಾಸೇಜ್ | 12.00 | | ಅಂಗವಿಕಲರು |

| | | | | | | | | | | |
|---|---|---|---|---|---|---|---|---|---|---|
| 13 | 22 | 4.00 | 3.00 | ಮಳಿಗೆ23 | ಮಳಿಗೆ–21 | ಮಳಿಗೆ–17 | ಪ್ಯಾಸೇಜ್ | 12.00 | | |
| 14 | 23 | 4.00 | 3.00 | ಮಳಿಗೆ.24 | ಮಳಿಗೆ–22 | ಮಳಿಗೆ–16 | ಪ್ಯಾಸೇಜ್ | 12.00 | | |
| 15 | 24 | 4.00 | 3.00 | ಪ್ಯಾಸೇಜ್ | ಮಳಿಗೆ–23 | ಮೆಟ್ಟಿಲು | ಪ್ಯಾಸೇಜ್ | 12.00 | | |
| 16 | 30 | 4.00 | 3.00 | ಮಳಿಗೆ.29 | ಮಳಿಗೆ–21 | ಪ್ಯಾಸೇಜ್ | ಮಳಿಗೆ–39 | 12.00 | | |
| 17 | 31 | 4.00 | 3.00 | ಮಳಿಗೆ.30 | ಮಳಿಗೆ–32 | ಪ್ಯಾಸೇಜ್ | ಮಳಿಗೆ–38 | 12.00 | | |
| 18 | 38 | 4.00 | 3.00 | ಮಳಿಗೆ39 | ಮಳಿಗೆ–37 | ಮಳಿಗೆ–31 | ಪ್ಯಾಸೇಜ್ | 12.00 | | |
| 19 | 39 | 4.00 | 3.00 | ಮಳಿಗೆ.40 | ಮಳಿಗೆ–38 | ಮಳಿಗೆ–30 | ಪ್ಯಾಸೇಜ್ | 12.00 | | |
| 20 | 40 | 4.00 | 3.00 | ಮಳಿಗೆ.40 | ಮಳಿಗೆ–39 | ಮಳಿಗೆ–29 | ಪ್ಯಾಸೇಜ್ | 12.00 | | |

**50 ನೇ ಮಳಿಗೆ ಯಿಂದ 64 ನೇ ಮಳಿಗೆಯವರೆಗೆ ಮಾಸಿಕ ಬಾಡಿಗೆ ರೂ. 2,000–00 ನಿಗದಿಯಾಗಿದೆ.**

**ಮಳಿಗೆಗಳ ವಿವರ.**

| | | | | | | | | | | |
|---|---|---|---|---|---|---|---|---|---|---|
| 21 | 41 | 4.00 | 3.00 | ಪ್ಯಾಸೇಜ್ | ಮಳಿಗೆ–42 | ಪ್ಯಾಸೇಜ್ | ಮಳಿಗೆ–40 | 12.00 | | |
| 22 | 42 | 4.00 | 3.00 | ಮಳಿಗೆ.41 | ಮಳಿಗೆ–43 | ಪ್ಯಾಸೇಜ್ | ಮಳಿಗೆ–45 | 12.00 | ಪ.ಪಂ | |
| 23 | 43 | 4.00 | 3.00 | ಮಳಿಗೆ.42 | ಮಳಿಗೆ–44 | ಪ್ಯಾಸೇಜ್ | ಮಳಿಗೆ–47 | 12.00 | ಪ.ಜಾ | |
| 24 | 44 | 4.00 | 3.00 | ಮಳಿಗೆ.43 | ಮೆಟ್ಟಿಲು | ಪ್ಯಾಸೇಜ್ | ಮಳಿಗೆ–48 | 12.00 | | |
| 25 | 45 | 4.00 | 3.00 | ಪ್ಯಾಸೇಜ್ | ಮಳಿಗೆ–45 | ಮಳಿಗೆ–41 | ಪ್ಯಾಸೇಜ್ | 12.00 | | |
| 26 | 46 | 4.00 | 3.00 | ಮಳಿಗೆ.45 | ಮಳಿಗೆ–47 | ಮಳಿಗೆ–42 | ಪ್ಯಾಸೇಜ್ | 12.00 | | |
| 27 | 47 | 4.00 | 3.00 | ಮಳಿಗೆ.46 | ಮಳಿಗೆ–48 | ಮಳಿಗೆ–43 | ಪ್ಯಾಸೇಜ್ | 12.00 | | |
| 28 | 48 | 4.00 | 3.00 | ಮಳಿಗೆ.47 | ಮಳಿಗೆ–49 | ಮಳಿಗೆ–44 | ಪ್ಯಾಸೇಜ್ | 12.00 | | |
| 29 | 49 | 4.00 | 3.00 | ಮಳಿಗೆ.48 | ಖಾಲಿಜಾಗ | ಮೆಟ್ಟಿಲು | ಪ್ಯಾಸೇಜ್ | 12.00 | | |
| 30 | 50 | 4.00 | 3.00 | ಪ್ಯಾಸೇಜ್ | ಮಳಿಗೆ–51 | ಪ್ಯಾಸೇಜ್ | ಪ್ಯಾಸೇಜ್ | 12.00 | | |
| 31 | 51 | 4.00 | 3.00 | ಮಳಿಗೆ.50 | ಮಳಿಗೆ–52 | ಖಾಲಿಜಾಗ | ಪ್ಯಾಸೇಜ್ | 12.00 | | |
| 32 | 52 | 4.00 | 3.00 | ಮಳಿಗೆ.51 | ಶೌಚಾಲಯ | ಖಾಲಿಜಾಗ | ಪ್ಯಾಸೇಜ್ | 12.00 | | |
| 33 | 53 | 4.00 | 3.00 | ಪ್ಯಾಸೇಜ್ | ಖಾಲಿಜಾಗ | ಶೌಚಾಲಯ | ಮಳಿಗೆ–54 | 12.00 | | |
| 34 | 54 | 4.00 | 3.00 | ಪ್ಯಾಸೇಜ್ | ಖಲಿಜಾಗ | ಮಳಿಗೆ–53 | ಮಳಿಗೆ–55 | 12.00 | | |
| 35 | 55 | 4.00 | 3.00 | ಪ್ಯಾಸೇಜ್ | ಖಾಲಿಜಾಗ | ಮಳಿಗೆ–54 | ಮಳಿಗೆ–56 | 12.00 | | |
| 36 | 56 | 4.00 | 3.00 | ಪ್ಯಾಸೇಜ್ | ಖಾಲಿಜಾಗ | ಮಳಿಗೆ–55 | ಮಳಿಗೆ–57 | 12.00 | ಪ.ಪಂ | |
| 37 | 57 | 4.00 | 3.00 | ಪ್ಯಾಸೇಜ್ | ಖಾಲಿಜಾಗ | ಮಳಿಗೆ–56 | ಮಳಿಗೆ–58 | 12.00 | ಪ.ಜಾ | |
| 38 | 58 | 4.00 | 3.00 | ಪ್ಯಾಸೇಜ್ | ಖಾಲಿಜಾಗ | ಮಳಿಗೆ–57 | ಮಳಿಗೆ–59 | 12.00 | ಪ.ಪಂ | |
| 39 | 59 | 4.00 | 3.00 | ಮಳಿಗೆ.60 | ಮಳಿಗೆ–58 | ಪ್ಯಾಸೇಜ್ | ಖಾಲಿಜಾಗ | 12.00 | | |
| 40 | 60 | 4.00 | 3.00 | ಮಳಿಗೆ.61 | ಮಳಿಗೆ–59 | ಪ್ಯಾಸೇಜ್ | ಖಾಲಿಜಾಗ | 12.00 | | |
| 41 | 61 | 4.00 | 3.00 | ಮಳಿಗೆ.62 | ಮಳಿಗೆ–60 | ಪ್ಯಾಸೇಜ್ | ಖಾಲಿಜಾಗ | 12.00 | | |
| 42 | 62 | 4.00 | 3.00 | ಪ್ಯಾಸೇಜ್ | ಪ್ಯಾಸೇಜ್ | ಮಳಿಗೆ–63 | ಮಳಿಗೆ–61 | 12.00 | | |
| 43 | 63 | 4.00 | 3.00 | ಪ್ಯಾಸೇಜ್ | ಪ್ಯಾಸೇಜ್ | ಪ್ಯಾಸೇಜ್ | ಮಳಿಗೆ–62 | 12.00 | | |
| 44 | 64 | 4.00 | 3.00 | ಪ್ಯಾಸೇಜ್ | ಮಳಿಗೆ–61 | ಮಳಿಗೆ–63 | ಶೌಚಾಲಯ | 12.00 | | ಅಂಗವಿಕಲ |

## ಹತ್ತನೇ ಹಣಕಾಸು ಯೋಜನೆಯಲ್ಲಿ ನಿರ್ಮಿಸಿರುವ 7 ವಾಣಿಜ್ಯ ಮಳಿಗೆಗಳು
## ಮಾಸಿಕ ಬಾಡಿಗೆ ರೂ.3,600-00 ನಿಗಧಿಯಾಗಿದೆ.

ಮಳಿಗೆಗಳ ವಿವರ.

| ಕ್ರ. ಸಂ. | ಮಳಿಗೆ ಗಳ ಸಂಖ್ಯೆ | ಅಳತೆ ಮೀಟರ್ ಗಳಲ್ಲಿ | | ಚಕ್ಕುಬಂದಿ | | | | ಒಟ್ಟು ವಿಸ್ತೀರ್ಣ ಚ.ಮೀ | ಪ.ಜಾ/ಪಂಗಡ ದವರಿಗೆ ಕಾಯ್ದಿರಿಸಿದ ಮಳಿಗೆ ಸಂಖ್ಯೆ | ಅಂಗ ರಿ ಕಾಯ್ದಿ ಸಂ |
|---|---|---|---|---|---|---|---|---|---|---|
| | | ಉ.ದ | ಪೂ.ಪ | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | | | |
| 1 | 1 | 6.10 | 3.35 | ಮಳಿಗೆ-2 | ಖಾಲಿಜಾಗ | ಖಾಲಿಜಾಗ | ಪ್ಯಾಸೇಜ್ | 20.44 | | |
| 2. | 2 | 6.10 | 3.35 | ಮಳಿಗೆ-3 | ಮಳಿಗೆ-1 | ಖಾಲಿಜಾಗ | ಪ್ಯಾಸೇಜ್ | 20.44 | | |
| 3 | 3 | 6.10 | 3.35 | ಮಳಿಗೆ-4 | ಮಳಿಗೆ-2 | ಖಾಲಿಜಾಗ | ಪ್ಯಾಸೇಜ್ | 20.44 | | |
| 4 | 4 | 6.10 | 3.35 | ಮಳಿಗೆ-5 | ಮಳಿಗೆ-3 | ಖಾಲಿಜಾಗ | ಪ್ಯಾಸೇಜ್ | 20.44 | | ಅಂಗ |
| 5 | 5 | 6.10 | 3.35 | ಮಳಿಗೆ-6 | ಮಳಿಗೆ-4 | ಖಾಲಿಜಾಗ | ಪ್ಯಾಸೇಜ್ | 20.44 | ಪ.ಜಾತಿ | |
| 6 | 6 | 6.10 | 3.35 | ಮಳಿಗೆ-7 | ಮಳಿಗೆ-5 | ಖಾಲಿಜಾಗ | ಪ್ಯಾಸೇಜ್ | 20.44 | | |
| 7 | 7 | 6.10 | 3.35 | ಖಾಲಿಜಾಗ | ಮಳಿಗೆ-6 | ಖಾಲಿಜಾಗ | ಪ್ಯಾಸೇಜ್ | 20.44 | | |

## ಷರತ್ತುಗಳು

1 ಬಹಿರಂಗ ಹರಾಜನ್ನು ಆಯಾಯ ವಾಣಿಜ್ಯ ಸಂಕೀರ್ಣಗಳು ಇರುವ ಸ್ಥಳಗಳಲ್ಲಿ ನಿಗಧಿಪಡಿಸಿದ ದಿನಾಂಕ ಮತ್ತು ಸಮಯದಲ್ಲಿ ಪೌರಾಯುಕ್ತರು, ನಗರಸಭೆ, ತುಮಕೂರು ರವರು ಅಧಿಕಾರ ಹೊಂದಿದವರಾಗಿದ್ದು, ಮಳಿಗೆಗಳನ್ನು ಕ್ರಮಸಂಖ್ಯೆ ರೀತ್ಯಾ ಹರಾಜು ಮಾಡಲಾಗುವುದು.

**2 ವಾಣಿಜ್ಯ ಮಳಿಗೆಗಳಿಗೆ ಅತ್ಯಂತ ಹೆಚ್ಚಿನ ಟೆಂಡರ್‌ದಾರರು/ಬಿಡ್ಡುದಾರರನ್ನು ತಾತ್ಕಾಲಿಕವಾಗಿ ಅಂಗೀಕರಿಸಿ 20 ವರ್ಷಕ್ಕೆ ಪರವಾನಗಿಯನ್ನು ನಗರಸಭೆ, ತುಮಕೂರು ರವರಿಂದ ಮಂಜೂರು ಮಾಡಿಕೊಡಲಾಗುವುದು. ತದನಂತರ ಯಶಸ್ವಿ ಬಿಡ್ಡುದಾರರ ಖರ್ಚಿನಲ್ಲಿ ನೊಂದಣಿ ಮಾಡಿಕೊಡಲಾಗುವುದು, ಹಾಗೂ 20 ವರ್ಷಗಳ ನಂತರ ಯಾವುದೇ ತಂಟೆ ತಕರಾರು ಮಾಡದೆ ಮಳಿಗೆಗಳು ಹೇಗೆ ಪಡೆಯಲಾಗಿತ್ತೋ, ಅದೇ ಸ್ಥಿತಿಯಲ್ಲಿ ಮಳಿಗೆಗಳನ್ನು ನಗರಸಭೆ, ತುಮಕೂರು ಇವರ ಸುಪರ್ದಿಗೆ ಹಿಂದಿರುಗಿಸಬೇಕು.**

3 ಅಂಗೀಕೃತ ಬಿಡ್ಡುದಾರರ ಪ್ರೀಮಿಯಂ ಹಣವನ್ನು ಯಾವುದೇ ಕಾರಣಕ್ಕೂ ಮರುಪಾವತಿ ಮಾಡುವುದಿಲ್ಲ.

4 ವಾಣಿಜ್ಯ ಮಳಿಗೆಗಳ ಅತ್ಯಂತ ಹೆಚ್ಚಿನ ಬಿಡ್ಡುದಾರರು ಶೇ.35 ರಷ್ಟು ಬಿಡ್ಡು ಮೊಬಲಗನ್ನು ಆ ದಿನವೇ ಪಾವತಿ ಮಾಡಬೇಕು. ಒಂದು ವೇಳೆ ವಿಫಲವಾದಲ್ಲಿ ಠೇವಣಿಗಾಗಿ ಪಾವತಿಸಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

5 ಉಳಿದ ಪ್ರಿಮೀಯಂ ಮೊತ್ತವನ್ನು 45 ದಿನಗಳ ಒಳಗಾಗಿ ಪಾವತಿಸತಕ್ಕದ್ದು, ಯಾವುದೇ ಕಾರಣಕ್ಕೂ ಅವಧಿ ವಿಸ್ತರಿಸುವುದಿಲ್ಲ. ತಪ್ಪಿದಲ್ಲಿ ಹರಾಜು ದಿವಸ ಪಾವತಿಸಿದ ಶೇ. 35 ರಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೂ ಸದರಿ ಮಳಿಗೆಗಳ ಮರು ಹರಾಜಿಗಾಗಿ ಅನುಮತಿ ನೀಡಲಾಗುವುದು.

6 ವಾಣಿಜ್ಯ ಮಳಿಗೆಗಳಿಗಾಗಿ ಯಾವ ಮಳಿಗೆಗೆ ಟೆಂಡರ್ ಜೊತೆಯಲ್ಲಿ ಇಟ್ಟಿರುವ ಠೇವಣಿ ಮೊತ್ತಕ್ಕೆ ಬಹಿರಂಗ ಹರಾಜಿನಲ್ಲಿ ಸಹ ಭಾಗವಹಿಸಲು ಅನುಮತಿ

ನೀಡಲಾಗುವುದು. ಟೆಂಡರ್‌ದಾರರು ನಮೂದಿಸಿರುವ ಟೆಂಡರ್ ಮಳಿಗೆಯನ್ನು ಬಿಟ್ಟು ಉಳಿದ ಮಳಿಗೆಯಲ್ಲಿ ಬಾಗವಹಿಸಲು ಹೆಚ್ಚುವರಿಯಾಗಿ ನಿಗಧಿತ ಠೇವಣಿಯನ್ನು ನಿಗಧಿತ ಸಮಯದಲ್ಲಿ ಪಾವತಿಸಿ ಹರಾಜಿನಲ್ಲಿ ಬಾಗವಹಿಸಬೇಕು.

7 ಬಹಿರಂಗ ಹರಾಜಿನಲ್ಲಿ ಯಶಸ್ವಿಯಾಗದ ಬಿಡ್ಡುದಾರರಿಗೆ ಪಾವತಿಸಿದ ಠೇವಣಿಯನ್ನು ಮರುಪಾವತಿ ಮಾಡಲಾಗುವುದು.

8 ಬಹಿರಂಗ ಹರಾಜಿನ ಯಶಸ್ವಿ ಬಿಡ್ಡುದಾರರಿಗೆ ಮಳಿಗೆ ಹಸ್ತಾಂತರವಾದ ದಿನಾಂಕದಿಂದ ಪರವಾನಗಿ ಶುಲ್ಕವನ್ನು ವಸೂಲಾತಿಗೆ ಪರಿಗಣಿಸಲಾಗುವುದು.

9 ಯಶಸ್ವಿ ಬಿಡ್ಡುದಾರರು ಕಟ್ಟಡದ ಮಳಿಗೆಗಳನ್ನು ನಗರಸಭೆಯ ಸೂಕ್ತ ಅನುಮತಿಪಡೆಯದೆ ಬೇರೆ ವ್ಯಕ್ತಿಗಳಿಗೆ ಮರು ಗುತ್ತಿಗೆ(sub lease) ಮಾಡತಕ್ಕದ್ದಲ್ಲ.

10 ಕಟ್ಟಡದ ಮಳಿಗೆಗಳಲ್ಲಿ ಸ್ಫೋಟಕ ವಸ್ತುಗಳನ್ನು ಮತ್ತು ಮದ್ಯ ಮಾಂಸ ಮಾರಾಟ ಮಾಡಬಾರದು ಹಾಗೂ ಕಾನೂನು ಬಾಹಿರ ವ್ಯಾಪಾರಗಳನ್ನು ಮಾಡಬಾರದು, ಈ ಅಧಿಕಾರನನ್ನು ನಗರಸಭೆ ಕಾಯ್ದಿರಿಸಿಕೊಂಡಿರುತ್ತೆ.ವ್ಯಾಪಾರ ಪ್ರಾರಂಭಿಸುವ ಮುನ್ನ ಪೌರಾಯುಕ್ತರು, ನಗರಸಭೆ, ತುಮಕೂರು ಇವರಿಂದ ಕಾನೂನು ಪ್ರಕಾರ ಉದ್ದಿಮೆ ಪರವಾನಗಿ ಪಡೆದು ಮಳಿಗೆ ಬಳಸಿಕೊಳ್ಳತಕ್ಕದ್ದು,

11 ಕಾಯ್ದಿರಿಸಿದ ಮಳಿಗೆಗಳಿಗೆ ಭಾಗವಹಿಸುವ ಅಂಗವಿಕಲರು, ಅಂಗವಿಕಲತೆ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ದೃಢೀಕರಣ ಪತ್ರವನ್ನು ಪೌರಾಯುಕ್ತರು, ನಗರಸಭೆಯವರಿಗೆ ಹರಾಜು ಮುಂಚಿತವಾಗಿ ಸಲ್ಲಿಸತಕ್ಕದ್ದು. ಭದ್ರತಾ ಠೇವಣಿಯಲ್ಲಿ ಯಾವುದೇ ರೀತಿಯ ವ್ಯತ್ಯಾಸವಿರುವದಿಲ್ಲ.

12 ಕಾಯ್ದಿರಿಸಿದ ಮಳಿಗೆಗಳಿಗೆ ಭಾಗವಹಿಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ತಹಸೀಲ್ದಾರರಿಂದ ದೃಢೀಕರಣ ಪತ್ರವನ್ನು ಪೌರಾಯುಕ್ತರು, ನಗರಸಭೆ, ತುಮಕೂರು ರವರಿಗೆ ಹರಾಜು ಮುಂಚಿತವಾಗಿ ಸಲ್ಲಿಸತಕ್ಕದ್ದು. ಭದ್ರತಾ ಠೇವಣಿಯಲ್ಲಿ ಯಾವುದೇ ರೀತಿಯ ವ್ಯತ್ಯಾಸವಿರುವದಿಲ್ಲ.

13 ಮಂಜೂರಾದ ಮಳಿಗೆಗಳ ಮೇಲೆ ಹೆಚ್ಚುವರಿ ಕಟ್ಟಡ ಕಟ್ಟುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿರುತ್ತದೆ. ಈ ಬಗ್ಗೆ ಗುತ್ತಿಗೆದಾರರು ಯಾವುದೇ ತಂಟೆ ತಕರಾರು ಮಾಡಲು ಅವಕಾಶವಿರುವುದಿಲ್ಲ.

14 ಹರಾಜು ಅಥವಾ ಟೆಂಡರ್‌ನಲ್ಲಿ ಪಡೆದ ಮಳಿಗೆಗಳಿಗೆ ಮಾಹೆಯಾನ ವಿದ್ಯುಚ್ಛಕ್ತಿ ಶುಲ್ಕವನ್ನು ಗುತ್ತಿಗೆದಾರರು ಪಾವತಿಸಬೇಕು.

15 ಪ್ರತಿ ತಿಂಗಳು 5ನೇ ತಾರೀಖಿನೊಳಗೆ ನಿಗಧಿತ ಮಾಹೆಯಾನ ಪರವಾನಗಿ ಶುಲ್ಕವನ್ನು ನಗರಸಭೆಗೆ ಪಾವತಿಸಬೇಕು, ತಪ್ಪಿದಲ್ಲಿ ಪ್ರತಿ ದಿನಕ್ಕೆ ರೂ.10/-, ಎರಡನೇ ಮಾಹೆಯಾನದಲ್ಲಿ ಪ್ರತಿ ದಿನಕ್ಕೆ ರೂ.20/-, ತೃತೀಯ ಮಾಹೆಯಾನದಲ್ಲಿ ಪ್ರತಿ ದಿನಕ್ಕೆ ರೂ.30/- ಗಳಂತೆ ದಂಡವಾಗಿ ಪಾವತಿಸಬೇಕು. ಇಲ್ಲವಾದಲ್ಲಿ ನಂತರ ನಾಲ್ಕನೇ ಮಾಹೆಯಾನದಲ್ಲಿ ಮಳಿಗೆಯನ್ನು ಖಾಲಿ ಮಾಡಿಸಿ ಮರು ಹರಾಜನ್ನು ಮಾಡುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ. ಈ ರೀತಿಯ ಗುತ್ತಿಗೆ ರದ್ದು ಮಾಡಿದ ನಂತರ ಈಗಾಗಲೇ ಪಾವತಿಸಿರುವ ಪ್ರಮೀಯಂ ಮೊತ್ತವನ್ನು ನಗರಸಭೆಯ ನಿಧಿಗೆ ಮುಟ್ಟುಗೋಲು ಹಾಕಿಕೊಳ್ಳುವುದು.

16 <u>ಪರವಾನಗಿ ಅವಧಿಯಲ್ಲಿ ಮಾಹೆಯಾನ ಪರವಾನಗಿ ಶುಲ್ಕ ಶೇ.10 ರಷ್ಟು ಪ್ರತಿ ಮೂರು ವರ್ಷಗಳಿಗೊಮ್ಮೆ ಹೆಚ್ಚಿಸಲಾಗುವುದು, ಹಾಗೂ ಈ ಷರತ್ತಿಗೆ ಒಪ್ಪಿ ಒಪ್ಪಂದ ಮಾಡಿಕೊಳ್ಳಬೇಕು, ಹಾಗೂ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಕಡ್ಡಾಯವಾಗಿ ನೊಂದಾಯಿಸಿಕೊಡತಕ್ಕದ್ದು.</u>

17 ಹರಾಜಿನಲ್ಲಿ ಬಿಡ್ಡುದಾರರು ಅಥವಾ ಅವರ ಪರವಾಗಿ ಅಧಿಕಾರ ಪತ್ರ (ಜಿ.ಪಿ.ಎ.ಹೊಲ್ಡರ್) ಹೊಂದಿರುವವರು ಮಾತ್ರ ಭಾಗವಹಿಸತಕ್ಕದ್ದು.

18 ಗುತ್ತಿಗೆದಾರರು ಕಾಲಾನುಕಾಲಕ್ಕೆ ಜಾರಿಯಾಗಬಹುದಾದ ನಿಯಮಗಳಿಗೆ ಬದ್ದರಾಗಿರತಕ್ಕದ್ದು.

19 ಮೇಲ್ಕಂಡ ಷರತ್ತುಗಳಲ್ಲಿ ಯಾವುದೇ ಷರತ್ತನ್ನು ರದ್ದುಪಡಿಸುವ ಹಕ್ಕನ್ನು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆ ಇವರು ಕಾಯ್ದಿರಿಸಿಕೊಂಡಿರುತ್ತಾರೆ.

20 ಮಳಿಗೆಗಳ ಟೆಂಡರ್ ಹಾಗೂ ಬಹಿರಂಗ ಹರಾಜು ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ಕಂದಾಯಾಧಿಕಾರಿ,ವ್ಯವಸ್ಥಾಪಕರನ್ನು ಸಂಪರ್ಕಿಸುವುದು ಹಾಗೂ ನಗರಸಭೆಯ **ವೆಬ್‌ಸೈಟ್:**<u>www.tumkurcity.gov.in</u>ನ್ನು ವಿಕ್ಷೀಸಬಹುದು

**ಸಹಿ/–**
**ಪೌರಾಯುಕ್ತರು**
**ನಗರಸಭೆ, ತುಮಕೂರು.**

**ಸಹಿ/–**
**ಅಧ್ಯಕ್ಷರು**
**ಐ.ಡಿ.ಎಸ್.ಎಂ.ಟಿ ಸಮಿತಿ**
**ಹಾಗೂ ಜಿಲ್ಲಾಧಿಕಾರಿಗಳು**
**ತುಮಕೂರು.**